ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1254(1402)**
ಸದಸ್ಯರ ಹೆಸರು	**ಶ್ರೀ ಧ್ರುವನಾರಾಯಣ ಆರ್ (ಸಂತೇಮರಳ್ಳಿ)**
ಉತ್ತರಿಸಬೇಕಾದ ಸಚಿವರು	**ಶ್ರೀ ಶರಣಬಸಪ್ಪ ದರ್ಶನಾಪುರ (ಕೃಷಿ ಮಾರುಕಟ್ಟೆ ಸಚಿವರು)**

ಅ) ಜೈವಿಕ ಇಂಧನ ಬೆಳಗಳಾದ ಜತ್ರೋಪ, ಹೊಂಗೆ, ಬೇವು ಬೆಳೆಯನ್ನು ಬೆಳೆಯಲು ಸರ್ಕಾರ ಇತ್ತೀಚಿನ ದಿನಗಳಲ್ಲಿ ಮಾಧ್ಯಮಗಳ ಮೂಲಕ ಪ್ರಚಾರ ಮಾಡುತ್ತಿರುವುದು ನಿಜವೇ,

ಹೌದು

ಆ) ಹಾಗಿದ್ದಲ್ಲಿ, ಈ ಬೆಳೆಗಳನ್ನು ಸಂಸ್ಕರಿಸಲು ಸಂಸ್ಕರಣಾ ಘಟಕಗಳನ್ನು ಸ್ಥಾಪಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಹಾಸನದಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿರುವ ಜೈವಿಕ ಇಂಧನ ಪಾರ್ಕ್‌ನಲ್ಲಿ ಜೈವಿಕ ಇಂಧನ ಬೆಳೆಗಳ ಉತ್ಪನ್ನವನ್ನು ಸಂಸ್ಕರಿಸುವ ಘಟಕವನ್ನು ಸ್ಥಾಪಿಸುವ ಕಾರ್ಯಕ್ರಮವಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1255(1403)**
ಮಾನ್ಯ ಸದಸ್ಯರ ಹೆಸರು	**ಶ್ರೀ ಧ್ರುವನಾರಾಯಣ ಆರ್ (ಸಂತೇಮರಳ್ಳಿ)**
ಉತ್ತರಿಸಬೇಕಾದ ಸಚಿವರು	**ಶ್ರೀ ಶರಣಬಸಪ್ಪ ದರ್ಶನಾಪುರ (ಕೃಷಿ ಮಾರುಕಟ್ಟೆ ಸಚಿವರು)**

ಅ) ಚಾಮರಾಜನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಅರಿಶಿನ ಬೆಳೆಗೆ ಮಾರುಕಟ್ಟೆ ಮತ್ತು ಸಂಸ್ಕರಣ ಘಟಕ ಪ್ರಾರಂಭಿಸುವ ಉದ್ದೇಶ ಸರ್ಕಾರಕ್ಕಿದೆಯೇ,

ಚಾಮರಾಜನಗರ ಜಿಲ್ಲೆಯಲ್ಲಿ ಚಾಮರಾಜನಗರ, ಗುಂಡ್ಲುಪೇಟೆ ಹಾಗೂ ಕೊಳ್ಳೇಗಾಲದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳನ್ನು ಸ್ಥಾಪಿಸಿದ್ದು, ಅವುಗಳ ವ್ಯಾಪ್ತಿಯಲ್ಲಿ ಅರಿಶಿನ ಉತ್ಪನ್ನವನ್ನು ಮಾರಾಟ ನಿಯಂತ್ರಣಕ್ಕಾಗಿ ಅಧಿಸೂಚನೆಗೊಳಿಸಲಾಗಿದೆ

ಸಂಸ್ಕರಣ ಘಟಕ ಸ್ಥಾಪಿಸುವ ವಿಷಯವು ಈಗ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ

ಆ) ಈ ಬಗ್ಗೆ ಸರ್ಕಾರದ ಕ್ರಮವೇನು,

ಚಾಮರಾಜನಗರ ಮಾರುಕಟ್ಟೆಯಲ್ಲಿ ಅರಿಶಿನ ಬೆಳೆ ಖರೀದಿಗೆ ಖರೀದಿದಾರರು ಇರುವುದಿಲ್ಲ ತಮಿಳುನಾಡಿನ ಈರೋಡಿಗೆ ಅರಿಶಿನ ಉತ್ಪನ್ನ ಮಾರಾಟಕ್ಕಾಗಿ ತೆಗೆದುಕೊಂಡು ಹೋಗಲಾಗುತ್ತಿದೆ

ಪ್ರಸ್ತುತ ಅರಿಶಿನ ಬೆಳೆಗೆ ಹೆಚ್ಚಿನ ಖರೀದಿದಾರರು ಇರುವುದಿಲ್ಲ ಖರೀದಿದಾರರು ಮುಂದೆ ಬಂದಲ್ಲಿ ಅರಿಶಿನ ಮಾರಾಟಕ್ಕೆ ವ್ಯವಸ್ಥೆ ಮಾಡಲಾಗುವುದು

ಇ) ಈ ಜಿಲ್ಲೆಯಲ್ಲಿ ಶೀಥಲ ಉಗ್ರಾಣ ತೆರಯುವ ಉದ್ದೇಶವಿದೆಯೇ,

ಪ್ರಸ್ತುತ ಇರುವುದಿಲ್ಲ

ಈ) ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಉದ್ಭವಿಸುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1256(1404)**

ಸದಸ್ಯರ ಹೆಸರು **ಶ್ರೀ ಧ್ರುವನಾರಾಯಣ ಆರ್ (ಸಂತೇಮರಳ್ಳಿ)**

ಉತ್ತರಿಸಬೇಕಾದ ಸಚಿವರು **ಶ್ರೀ ಶಶಿಕಾಂತ ಅ ನಾಯಿಕ (ತೋಟಗಾರಿಕೆ ಸಚಿವರು)**

ಅ) ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿಯಲ್ಲಿ ಬರುವ ಜೆಲ್ಲಗಳಾವುವು,

ರಾಷ್ಟ್ರೀಯ ತೋಟಗಾರಿಕ ಮಿಷನ್ ಯೋಜನೆಯಡಿ ಬರುವ ಜಿಲ್ಲೆಗಳು ಕೆಳಕಂಡಂತ ಇವೆ

1 ಬೆಂಗಳೂರು (ಗ್ರಾ)
2 ತುಮಕೂರು
3 ಮೈಸೂರು
4 ಕೋಲಾರ
5 ಚಿತ್ರದುರ್ಗ
6 ಬಳಗಾಂ
7 ಬಾಗಲಕೋಟೆ
8 ಬಿಜಾಪುರ
9 ಕೊಡಗು